O.S. 34/2020 PW-2

ದಿನಾಂಕಃ 08.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

**<u>ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ</u>**

ಪ್ರತಿವಾದಿಯು ಜಮೀನಿನ್ನು ಖಾತೆ ಬದಲಾವಣೆ ಮಾಡಿಕೊಂಡಿದ್ದಾರೆ ಎಂದು ವಾದಿಯು ಸದರಿ ದಾವೆಯನ್ನು ಹೂಡಿದರುತ್ತಾರೆ. ನಾನು ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿಲ್ಲ ಎಂದರೆ ಸರಿ. ನಾನು ಹುಟ್ಟಿದಾಗಿನಿಂದಲೂ ಬಂದಕುಂಟೆ ಗ್ರಾಮದಲ್ಲಿ ವಾಸವಿದ್ದೇನೆ. ಬಂದಕುಂಟೆಯಲ್ಲಿ ನನ್ನ ಸಹೋದರರು ಸಹ ವಾಸವಿರುತ್ತಾರೆ. ನನಗೆ ಮೂರು ಜನ ಅಣ್ಣಂದಿರು ಹಾಗೂ ನಾಲ್ಕು ಜನ ಅಕ್ಕ ತಂಗಿಯರು ಇರುತ್ತಾರೆ. ವಾದಿಗೆ ಒಬ್ಬ ಅಕ್ಕ, ಇಬ್ಬರು ತಂಗಿ ಹಾಗೂ ಒಂದು ತಮ್ಮ ಇರುತ್ತಾರೆ. ನನಗೂ ವಾದಿಗೂ ಯಾವುದೇ ಸಂಬಂಧ ಇಲ್ಲ. ವಾದಿಯ ತಂದೆ ಹೆಸರು ಯರಪ್ಪ. ಯರಪ್ಪ ರವರಿಗೆ ಇಬ್ಬರು ಅಣ್ಣ ತಮ್ಮಂದಿರು ಇರುತ್ತಾರೆ. ದಾವಾ ಸ್ವತ್ತಿನ ಸರ್ವೆ ನಂ.95/2. ಮೂಲ ಸರ್ವೆ ನಂ.95 ರಲ್ಲಿ ಒಟ್ಟು 3 ಎಕರೆ 37 ಗುಂಟೆ ಜಮೀನು ಇತ್ತು ಹಾಗೂ ಅದು ಕಾಡಪ್ಪ ರವರ ಹೆಸರಿನಲ್ಲಿ ಇತ್ತು, ನಂತರ ತಿಮ್ಮಣ್ಣ ರವರ ಹೆಸರಿಗೆ ಆಗಿರುತ್ತದೆ. ಪ್ರಸ್ತುತ ತಿಮ್ಮಣ್ಣ ರವರ ಹೆಸರಿಗೆ ಎಷ್ಟು ಎಕರೆ ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ದಾವಾ ಸ್ವತ್ತಿನ ಸರ್ವೆ ನಂ.95/2 ಯರಪ್ಪ ರವರ ಹೆಸರಿಗೆ ಯಾವಾಗ ಬಂತು ಎಂದು ನನಗೆ ಗೊತ್ತಿಲ್ಲ. 1 ಮತ್ತು 2 ನೇ ವಾದಿಗಳು ಬೇವಿನಹಳ್ಳಿಯಲ್ಲಿ ವಾಸವಾಗಿದ್ದಾರೆ. ವಾದಿಗಳು ಬೇವಿನಹಳ್ಳಿ ಹಾಗೂ ಬಂದುಕುಂಟೆ ಎರಡೂ ಕಡೆ ವಾಸಮಾಡುತಿದ್ದಾರೆ. 1 ಹಾಗೂ 2 ನೇ ವಾದಿಗಳು ವಿಭಾಗ ಮಾಡಿಕೊಂಡಿರುವುದರ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ವಾದಿ ಮತ್ತು ಪ್ರತಿವಾದಿಗಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು ವಾದಿಗಳು ಮತ್ತು ಪ್ರತಿವಾದಿ ದಾವಾ ಸ್ವತ್ತಿನಲ್ಲಿ ಜಂಟೆಯಾಗಿ ವ್ಯವಸಾಯ ಮಡುತಿದ್ದಾರೆ ಎಂದು ನುಡಿದಿರುತ್ತಾರೆ. ಪ್ರತಿವಾದಿಗೆ ಎಷ್ಟು ಜಮೀನು ಇದೆ ಎಂದು ನನಗೆ ಗೊತ್ತಿಲ್ಲ. ತಿಮ್ಮಣ್ಣ ರವರು ದಾವಾ ಸ್ವತ್ತನ್ನು ಪ್ರತಿವಾದಿಗೆ ಕ್ರಯ ಮಾಡಿಕೊಟ್ಟಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕು ಬಂಧಿ ಪೂರ್ವಕ್ಕೆ-ಹನುಮಣ್ಣ ರವರ ಜಮೀನು, ಪಶ್ಚಿಮಕ್ಕೆ-ಕಗ್ಗಲಹಳ್ಳಿಯ ಗಡಿ, ಉತ್ತರಕ್ಕೆ-ಚಿತಯ್ಯ ಮತ್ತು ಮುದಿಯಣ್ಣ ರವರ ಜಮೀನು ಮತ್ತು ದಕ್ಷಿಣಕ್ಕೆ- ನಾಗಪ್ಪ ರವರ ಜಮೀನು ಇರುತ್ತದೆ. ಸರ್ವೆ ನಂ.95/2 ರನ್ನು ಹೊರತುಪಡಿಸಿ ಉಳಿದ ಜಮೀನು ತಿಮ್ಮಣ್ಣ ರವರ ಹೆಸರಿನಲ್ಲಿ ಇದೆ ಎಂದರೆ ಸರಿ. ತಿಮ್ಮಣ್ಣ ರವರು ಸುಮಾರು 20 ವರ್ಷಗಳ ಹಿಂದೆ ಮೃತಪಟ್ಟಿರುತ್ತಾರೆ.

ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಪ್ರಕರಣವನ್ನು ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಶಿರಾ.